## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್  131/2018

ಪಿ-ಡಬ್ಲ್ಯೂ-1

**ದಿನಾಂಕ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎನ್.ಎಸ್.  ಪ್ರತಿವಾದಿ ಪರ ವಕೀಲರುಃ**

ನಮ್ಮ ತಂದೆ ಸಣ್ಣಮಲ್ಲೇಗೌಡ ದಿಃ 13-06-1989 ರಂದು ಈರೇಗೌಡರ ಮಗ ಸಣ್ಣೇಗೌಡರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಾಯಿಯ ಜಮೀನನ್ನು ಖರೀದಿ ಮಾಡಿರುತ್ತಾರೆ.  ಅದೇ ರೀತಿ ದಿಃ 15-09-1992 ರಂದು ನಮ್ಮ ತಂದೆ ಸಣ್ಣಮಲ್ಲೇಗೌಡರಿಗೆ ಮಲ್ಲೇಗೌಡರಿಂದ ಖರೀದಿ ಮಾಡಿರುವ ಕ್ರಯ ಪತ್ರ ಎಂದರೆ ಸರಿ.  ಅದೇ ರೀತಿ  ಸಾಕ್ಷಿ ಮುಂದುವರೆದು ನಮ್ಮ ತಾಯಿಯ ಜಮೀನನ್ನು ಖರೀದಿ ಮಾಡಿರುತ್ತಾರೆ.

**2**. ನಮ್ಮ ತಾಯಿಯ ಆಸ್ತಿಯನ್ನು ಮಾರಾಟ ಮಾಡಿರುವ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದು ತಿಳಿಸಿರುತ್ತಾರೆ. ಸದರಿ ಸ್ವತ್ತುಗಳು ನಮ್ಮ ತಂದೆ ಜೀವಂತ ವಾಗಿದ್ದಾಗ ಸ್ವತ್ತುಗಳನ್ನು ಯಾರಿಗೂ ಬರಿಯದೇ ಹಾಗೆಯೇ ಮರಣ ಹೊಂದಿರುತ್ತಾರೆ.  ನಮ್ಮ ತಂದೆ ಮೃತ ಪಟ್ಟಾಗ ನಮ್ಮ ದೊಡ್ಡಮ್ಮ ಮತ್ತು ಅವರ ಮಗಳನ್ನು ವಂಶವೃಕ್ಷದಲ್ಲಿ ಕೈ ಬಿಟ್ಟು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆಸ ರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ದೊಡ್ಡಮ್ಮ ಸಹಿ ಮಾಡಿಕೊಟ್ಟಿರುತ್ತಾರೆ.

3. ನಮ್ಮ ದೊಡ್ಡಮ್ಮ ಸಹಿ ಮಾಡಿ ಕೊಟ್ಟಿರುವ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.  ನಿಡಿ-17 ಮತ್ತು 18 ರ ಸ್ವತ್ತುಗಳು ಮತ್ತು ಅದೇ ರೀತಿ ದಾವಾ ಸ್ವತ್ತುಗಳು ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.  ನಾವು ನಮ್ಮ ದೊಡ್ಡಮ್ಮ ರವರು ಯಾವುದೇ ಪತ್ರವನ್ನು ಬರೆದು ಕೊಡದೇ ಇದ್ದರೂ ಸಹ ಅವರಿಗೆ ಮೋಸ ಮಾಡುವ

ಉದ್ದೇಶದಿಂದ  ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ  ಪೌತಿ ಖಾತೆಯನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾದ ಕಾರಣ ವಾದಿಗಳಿಗೆ  ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ